# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 07.11.2020 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ.17 (ಜೆ ಪಿ ಪಾರ್ಕ್) ರಲ್ಲಿ ಶ್ರೀ. ಎ. ಬಿ. ದೊಡ್ಡಯ್ಯ, (ಮುಖ್ಯ ಅಭಿಯಂತರರು, ದಾಸರಹಳ್ಳಿ ವಲಯ) ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

**ಹಾಜರಿದ್ದವರು:-**

| ಕ್ರಮ ಸಂಖ್ಯೆ | ಅಧ್ಯಕ್ಷರು / ಸದಸ್ಯರ ಹೆಸರು | ಪದನಾಮ / ಇಲಾಖೆ | ಹಾಜರಿದ್ದರು |
|---|---|---|---|
| 1 | ಶ್ರೀ ಎ. ಬಿ. ದೊಡ್ಡಯ್ಯ | ವಾರ್ಡ್ ನೋಡಲ್ ಅಧಿಕಾರಿಗಳು | ಹಾಜರಿದ್ದರು |
| 2 | ಶ್ರೀ ಅಜಗಣ್ಣಯ್ಯ ಸ್ವಾಮಿ | ಸಹಾಯಕ ಅಭಿಯಂತರರು | ಹಾಜರಿದ್ದರು |
| 3 | ಡಾ॥ ಚೇತನ್ | ವೈದ್ಯಾಧಿಕಾರಿಗಳು | ಹಾಜರಿದ್ದರು |
| 4 | ಶ್ರೀ ಸೋಮಶೇಖರ್ ಎಸ್. | ಕಿ. ಆ. ಪ. | ಹಾಜರಿದ್ದರು |
| 5 | ಶ್ರೀ ಅವಿನಾಶ್ | ಬಿಡಬ್ಲ್ಯೂಎಸ್ಎಸ್‌ಬಿ | ಹಾಜರಿದ್ದರು |
| 6 | ಶ್ರೀ ಆಶೀರ್ವಾದ | 17/ಬಿ, ಮೇಲ್ವಿಚಾರಕರು | ಹಾಜರಿದ್ದರು |
| 7 | ಶ್ರೀ ಎಂ. ಸಿ. ವಿಲ್ಸನ್ | ಮೇಲ್ವಿಚಾರಕರು | ಹಾಜರಿದ್ದರು |
| 8 | ಶ್ರೀ ವೆಂಕಟೇಶ್ | ಮೇಲ್ವಿಚಾರಕರು | ಹಾಜರಿದ್ದರು |
| 9 | ಬಸವರಾಜು | ವಾರ್ಡ್-17/ಸಿ ಮೇಲ್ವಿಚಾರಕರು | ಹಾಜರಿದ್ದರು |
| 10 | ಶ್ರೀ ಮುರಳಿ | ಮೇಲ್ವಿಚಾರಕರು | ಹಾಜರಿದ್ದರು |
| 11 | ನಾಗೇಗೌಡ | ಮೇಲ್ವಿಚಾರಕರು | ಹಾಜರಿದ್ದರು |
| 12 | ಅಲಿಸ್ಟರ್ | ಮೇಲ್ವಿಚಾರಕರು | ಹಾಜರಿದ್ದರು |
| 13 | ಅಭಿಷೇಕ್ | ಮಾರ್ಷಲ್ | ಹಾಜರಿದ್ದರು |

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು / ಹಾಜರಿದ್ದವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

**1) ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

➢ ಮತ್ತಿಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಕೋವಿಡ್ ಪರೀಕ್ಷೆಯ ವಿವರಗಳನ್ನು ಸಭೆಯಲ್ಲಿ ಮಂಡಿಸಿದರು.

ಮತ್ತಿಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸ್ವಯಂ ಪ್ರೇರಿತರಾಗಿ ರೋಗ ಲಕ್ಷಣಗಳಿರುವ ಸುಮಾರು 65 ಜನರಿಗೆ ಹಾಗೂ ಇತರ ಪ್ರದೇಶಗಳಲ್ಲಿ ಸುಮಾರು 185 ರಿಂದ 200 ಜನರಿಗೆ ಪ್ರತಿದಿನ ಕೋವಿಡ್ ಪರೀಕ್ಷೆ ನಡೆಸುತ್ತಿರುವುದಾಗಿ ಹಾಗೂ ಇದನ್ನು 300ಕ್ಕೆ ಹೆಚ್ಚಿಸುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದರು.

ಪು.ತಿ.ನೋ....2

Scanned with CamScanner

ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ ಜನಜಾಗೃತಿ ಮೂಡಿಸಲು ಧ್ವನಿವರ್ಧಕವಿರುವ ಆಟೋಗಳಲ್ಲಿ ಸಾಯಂಕಾಲ 5 ರಿಂದ 7 ಗಂಟೆಯವರೆಗೆ ಜನ ನಿಬಿಡ ಪ್ರದೇಶಗಳಲ್ಲಿ ಪ್ರಚಾರ ಮಾಡಲು ವ್ಯವಸ್ಥೆ ಮಾಡುವಂತೆ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಲಾಯಿತು. ಜೊತೆಗೆ ಬೀದಿ ಬೀದಿಗಳಲ್ಲಿ ತಳ್ಳುವ ಗಾಡಿ ಮತ್ತು ಇತರೆ ವಾಣಿಜ್ಯ ಚಟುವಟಿಕೆದಾರರಿಗೆ ತ್ಯಾಜ್ಯವನ್ನು ಸೂಕ್ತವಾಗಿ ವಿಲೇವಾರಿ ಮಾಡುವಂತೆ ಜಾಗೃತಿ ಮೂಡಿಸಲು ಸಭೆಯಲ್ಲಿ ಚರ್ಚಿಸಲಾಯಿತು.

**2) ಬೀದಿ ನಾಯಿಗಳ ಬಗ್ಗೆ:-**

ವಾರ್ಡ್ ಪರಿಮಿತಿಯಲ್ಲಿ ಬೀದಿ ನಾಯಿಗಳ ಕಾಟ ಅತಿಯಾಗಿದ್ದು, ಸಾರ್ವಜನಿಕರಿಗೆ ಇದರಿಂದ ತೊಂದರೆಯಾಗುತ್ತಿದ್ದು, ಇವುಗಳ ನಿಯಂತ್ರಣಕ್ಕಾಗಿ, ಡಾ|| ಶಿಂಧೆ ಅವರೊಂದಿಗೆ ಮಾತನಾಡಿದ್ದು, ಬೀದಿ ನಾಯಿಗಳಿಗೆ ಚುಚ್ಚುಮದ್ದನ್ನು ನೀಡಲು ಡಿಸೆಂಬರ್ ಒಳಗಾಗಿ ಕ್ರಮಕೈಗೊಳ್ಳಲು ಅಧ್ಯಕ್ಷರು ಸೂಚಿಸಿರುತ್ತಾರೆ.

**3) ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನದ ಬಗ್ಗೆ:-**

ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಟೀ ಸ್ಟಾಲ್‌ಗಳಲ್ಲಿ ಯುವಕರು ಧೂಮಪಾನ ಮಾಡುವುದು ಅತಿಯಾಗಿ ಕಂಡುಬಂದಿರುತ್ತದೆ. ಸರ್ಕಾರದ ಆದೇಶದಂತೆ ಸಾರ್ವಜನಿಕ ಸ್ಥಳಗಳಲ್ಲಿ ಹಿಂದಿನಿಂದಲೂ ಧೂಮಪಾನ ನಿಷೇಧವಿದ್ದು, ಇನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಆರೋಗ್ಯ ಇಲಾಖೆ ಹಾಗೂ ಪೋಲಿಸ್ ಇಲಾಖೆಯವರಿಗೆ ನಿರ್ದೇಶನ ನೀಡಲಾಗಿರುತ್ತದೆ.

**4) ಬೆಸ್ಕಾಂನವರು ಕಟಾವು ಮಾಡಿದ ಮರಗಳ ರೆಂಬೆಗಳನ್ನು ತೆರವುಗೊಳಿಸುವ ಬಗ್ಗೆ:-**

ಮಾನ್ಯ ಅಧ್ಯಕ್ಷರು ಮಾತನಾಡಿ, ಪ್ರಸ್ತಾಪಿತ ವಿಷಯದ ಬಗ್ಗೆ ಸಂಬಂಧಪಟ್ಟ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಬೆಸ್ಕಾಂ) ರವರಿಗೆ ಕ್ರಮವಹಿಸಲು ಸೂಚಿಸಿರುತ್ತಾರೆ.

**5) ಈಜುಕೊಳದ ಪಕ್ಕದಲ್ಲಿರುವ ಆಸ್ಪತ್ರೆಯ ಮುಂದೆ ಮಳೆ ನೀರಿನ ಸಮರ್ಪಕ ನಿರ್ವಹಣೆಯ ಬಗ್ಗೆ:-**

ಮಾನ್ಯ ಅಧ್ಯಕ್ಷರು ಮಾತನಾಡಿ, ಈಜುಕೊಳದ ಪಕ್ಕದಲ್ಲಿರುವ ಆಸ್ಪತ್ರೆಯ ಮುಂದೆ ಮಳೆ ನೀರಿನ ಸಮರ್ಪಕ ನಿರ್ವಹಣೆಯ ಕುರಿತು ಸಂಬಂಧಪಟ್ಟ ವಾರ್ಡ್ ಸಹಾಯಕ ಅಭಿಯಂತರರಿಗೆ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿರುತ್ತಾರೆ.

ಪು.ತಿ.ನೋ....3

Scanned with CamScanner

6) ಮಾಸ್ಕ್ ಹಾಕದಿರುವ ವ್ಯಕ್ತಿಗಳಿಗೆ ದಂಡ ವಿಧಿಸುವ ಬಗ್ಗೆ:-

ಪ್ರಸ್ತಾಪಿತ ವಿಷಯದ ಬಗ್ಗೆ ಮಾರ್ಷಲ್‌ಗಳೊಂದಿಗೆ ಚರ್ಚಿಸಲಾಗಿದ್ದು, ಕೋವಿಡ್ ನಿಯಂತ್ರಣ ಸಂಬಂಧ ಮಾಸ್ಕ್ ಹಾಕದಿರುವ ಸಾರ್ವಜನಿಕರಿಗೆ ಸರ್ಕಾರದ ಆದೇಶದ ರೀತ್ಯಾ ದಂಡ ವಿಧಿಸಲು ಸೂಚಿಸಲಾಯಿತು.

7) ಜೋಡಿ ರಸ್ತೆಯಲ್ಲಿರುವ ಕಟ್ಟಡದ ಭಗ್ನಾವಶೇಷಗಳನ್ನು (Debris) ತೆರವುಗೊಳಿಸುವ ಬಗ್ಗೆ:-

ವಾರ್ಡ್‌ನ ಕೆಲವೊಂದು ರಸ್ತೆಗಳಲ್ಲಿ ಕಟ್ಟಡದ ಭಗ್ನಾವಶೇಷಗಳು (Debris) ಅತಿಯಾಗಿ ಇರುವುದು ಕಂಡುಬಂದಿದ್ದು, ಈ ವಿಷಯದ ಬಗ್ಗೆ ಸಂಬಂಧಪಟ್ಟ ಸಹಾಯಕ ಅಭಿಯಂತರರು ಮಾತನಾಡಿ, ಇವುಗಳನ್ನು ತ್ವರಿತವಾಗಿ ತೆರವುಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

8) ಮ್ಯಾನ್‌ಹೋಲ್ ಬ್ಲಾಕ್ ಆಗಿ ರಸ್ತೆಗೆ ಹರಿದುಬರುತ್ತಿರುವ ಬಗ್ಗೆ.

ಮೋಹನ್ ಕುಮಾರ್ ನಗರ ಹಾಗೂ ಬಾಂಬೆ ಡೈಯಿಂಗ್ ಹತ್ತಿರ ರಸ್ತೆಗಳಲ್ಲಿರುವ ಮ್ಯಾನ್‌ಹೋಲ್ ಬ್ಲಾಕ್ ಆಗಿದ್ದು, ರಸ್ತೆಗೆ ಹರಿದುಬರುತ್ತಿದ್ದು, ಇದರಿಂದಾಗಿ, ಸಾರ್ವಜನಿಕ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ಹಾಗೂ ಸಾರ್ವಜನಿಕ ಆರೋಗ್ಯಕ್ಕೆ ಹಾನಿಯಾಗುವ ಸಂಭವವಿದ್ದು, ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್‌ಎಸ್‌ಬಿ ರವರಿಗೆ ಸೂಚಿಸಿರುತ್ತಾರೆ.

ಕೊನೆಯದಾಗಿ ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರ ಸಮಸ್ಯೆ / ದೂರುಗಳನ್ನು ದಾಖಲಿಸಲು ವಾರ್ಡ್‌ನಲ್ಲಿ ದೂರು ದಾಖಲಿಸುವ ಪುಸ್ತಕ ಲಭ್ಯವಿರುವಂತೆ ನೋಡಿಕೊಂಡು ಬರುವ ದೂರುಗಳನ್ನು ಆದ್ಯತೆಯ ಮೇರೆಗೆ ಕ್ರಮವಹಿಸುವಂತೆ ಹಾಗೂ ಪ್ರತಿ ವಾರ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ಮುಂದುವರೆಸುಂತೆ ಸೂಚಿಸುತ್ತಾ, ಸಕಾಲದಲ್ಲಿ ಸಾರ್ವಜನಿಕ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ಕೈಗೊಂಡು ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| 09/11/2020 | 9/11/2020 |
| (ಅಜಗಣ್ಣಯ್ಯ ಸ್ವಾಮಿ) | (ವಿ. ಬಿ. ದೊಡ್ಡಯ್ಯ) |
| ಸಹಾಯಕ ಅಭಿಯಂತರರು ಹಾಗೂ | ಮುಖ್ಯ ಅಭಿಯಂತರರು ಹಾಗೂ |
| ಸದಸ್ಯ ಕಾರ್ಯದರ್ಶಿ | ವಾರ್ಡ್ ನೋಡಲ್ ಅಧಿಕಾರಿ |
| ವಾರ್ಡ್ ಸಂಖ್ಯೆ:17 | ವಾರ್ಡ್ ಸಂಖ್ಯೆ:17 |

Scanned with CamScanner